## ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ

## ಕೆ.ಆರ್.ನಗರ

## ಓಎಸ್  183/2021

ಡಿ  ಡಬ್ಲ್ಯೂ-1

**ದಿನಾಂಕ 13-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಂದುವರೆದ  ಪಾಟೀ ಸವಾಲು ಶ್ರೀ ಎಮ್.ಸಿ.ಎಸ್ ವಾದಿ ಪರ ವಕೀಲರುಃ**

ವಾದಿಯ ಕಡೆಯಿಂದ ಬಡ್ಡಿ ನೀಡುವುದಾಗಿ ಸಾಲ ಪಡೆದುಕೊಂಡಿದ್ದಾಗಿ ನಿಪಿ-1 ರಲ್ಲಿ ನಮೂದಾಗಿಲ್ಲ. ವಾದಿಯ ಕಡೆಯಿಂದ ಬಡ್ಡಿ ನೀಡುವುದಾಗಿ ಸಾಲ ಪಡೆದುಕೊಂಡಿರುವುದಾಗಿ ಯಾವುದೇೀ ಪತ್ರ ಇರುವುದಿಲ್ಲ. ವಾದಿಗೆ ಮನೆಯನ್ನು ಮಾರಾಟ ಮಾಡುವುದಾಗಿ ಒಪ್ಪಿ 4,25,000/- ಕ್ಕೆ  ಕ್ರಯದ ಮೊತ್ತ ನಿದಿಗದಿಯಾಗಿ ಮುಂಗಡವಾಗಿ  4 ಲಕ್ಷ ಹಣವನ್ನು ವಾದಿಗಳ ಕಡೆಯಿಂದ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ.

2. ವಾದಿಗಳಿಗೆ ಮನೆಯನ್ನು ಮಾರಾಟ ಮಾಡುವುದಾಗಿ ಒಪ್ಪಿ ನಿಪಿ-1 ಪತ್ರವನ್ನು  ಬರೆದು ಕೊಟ್ಟಿದ್ದರು ಸಹ  ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗಳು ತೇಜಶ್ವಿನಿ ಮದುವೆ ಮಾಡಿ ಕೊಟ್ಟಿರುತ್ತೇನೆ. ಸದರಿ  ಮಗಳ  ಮದುವೆಗಾಗಿ ಮನೆಯನ್ನು ಮಾರಾಟ ಮಾಡುವುದಾಗಿ ನಿಪಿ-1 ನ್ನು ಬರೆದುಕೊಟ್ಟಿರುತ್ತೇನೇ ಎಂದರೆ ಸರಿಯಲ್ಲ. ಕೇವಲ ನಮ್ಮ ಹಣದ ಅವಶ್ಯಕತೆಗಾಗಿ  ಸಾಲವನ್ನು ಪಡೆದುಕೊಂಡಿರುತ್ತೇನೆ.

**3**. ನಿಪಿ-1 ಕ್ರಯ ಪತ್ರದ ನಿಭಂದನೆಗಳ ಮೇರೆಗೆ ನಾವುಗಳು ವಾದಿಗಳಿಗೆ  ಕ್ರಯ ಪತ್ರವನ್ನು  ಬರೆದುಕೊಡಲು  ಭಾದ್ಯಸ್ಥರು ಮತ್ತು ಜವಾಬ್ದಾರಾಗಿರುತ್ತೆವೆ ಎಂದರೆ ಸರಿಯಲ್ಲ. ನಾವು  ಒಪ್ಪಂದ ಪತ್ರದ ಪ್ರಕಾರ ಕ್ರಯ ಪತ್ರವನ್ನು ಮಾಡಿಕೊಡಲು ತಪ್ಪಿದಲ್ಲಿ ಮತ್ತು ನಿರಾಕರಿಸಿದ್ದಲ್ಲಿ ನಮ್ಮ ವಿರುದ್ಧಕಾನೂನು ರೀತ್ಯಾ ಕ್ರಮ ಕೈಗೊಂಡು ಕ್ರಯ ಪತ್ರವನ್ನು ಪಡೆದುಕೊಳ್ಳಲು ವಾದಿಗಳು ಅಧಿಕಾರವನ್ನು ಹೊಂದಿರುವುದಾಗಿ  ಕಂಡಿಕೆ 7 ರಲ್ಲಿ ನಮೂದಿಸಿ ಕ್ರಯದ ಒಪ್ಪಂದ ಪತ್ರವನ್ನು ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ.

**4**. ಸಾಮಾನ್ಯವಾಗಿ ಯಾವುದೇ ಕ್ರಯದ ಮಾತುಕತಯ ಸಂದರ್ಭದಲ್ಲಿ ಗ್ರಾಮಸ್ಥರನ್ನು ಸೇರಿಸಿ ಪಕ್ಷಗಾರರ ಸಮ್ಮತಿಯ ಮೇರೆಗೆ ಮೌಲ್ಯವನ್ನು ನಿಗದಿ ಪಡಿಸುತ್ತೇವೆ ಎಂದರೆ ಸರಿ. ನಮಗೆ ಹಣದ ಅವಶ್ಯಕತೆ ಮತ್ತು ದರದು ಇದುದ್ದರಿಂದ ಯಾವುದೇ ದಾಖಲೇಗಳನ್ನು ಪರೀಶಿಲಿಸಿರುವುದಿಲ್ಲ. ವಾದಿ ಮತ್ತು ನಮ್ಮಗಳ ಮಾತುಕತೆಯಿಂದ ಕ್ರಯದ ಒಪ್ಪಂದದ ಮಾತುಕತೆಯಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ-1 ರಂತೆ ನಾವು ಪ್ರತಿವಾದಿಗಳಿಗೆ ಕ್ರಯ ಪತ್ರವನ್ನು ಬರೆದುಕೊಡಲು ಬಾಧ್ಯಸ್ಥರು ಎಂದರೆ ಸರಿಯಲ್ಲ.

ಈ ಹಂತದಲ್ಲಿ ವಾದಿ ಪರ ವಕೀಲರು ಸಂಪೂರ್ಣವಾಗಿ ಪಾಟೀ ಸವಾಲನ್ನು ಮಾಡಿರುತ್ತಾರೆ.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ ಎಂ

**(ಚಂದನ್.ಎಸ್)**

ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ